

ಅಶೋಕ ವನದಲ್ಲಿ ಸೀತೆ, ಹನುಮನ ಪ್ರತಿಕೃತಿ



ಕ್ಯಾಂಡಿಯಲ್ಲಿನ ಸುಂದರ 'ಬುದ್ಧ ದಂತ ದೇಗುಲ'



ಸುನಾಮಿಯಲ್ಲಿ ಮಡಿದವರ ಸ್ಮರಣಾರ್ಥ ನಿರ್ಮಿಸಿರುವ ಸ್ಮಾರಕ

ಮೀನು ಹಿಡಿಯುವ ಯಾಂತ್ರಿಕ ದೋಣಿಯ ಮೀನುಗಾರರ ಕೈಚಳಕವನ್ನೂ ಕಣ್ತುಂಬಿಕೊಂಡೆವು.

ಸಮುದ್ರದ ಆಳೆತ್ತರದ ಅಲೆಗಳು ನಮ್ಮ ಬೋಟಿಗೆ ಬಡಿದು ಆಪಾದಮಸ್ತಕ ಉಪ್ಪುನೀರಿನ ಅಭ್ಯಂಜನ ಮಾಡಿಸಿದ್ದವು. ಮಾರ್ಗದಲ್ಲಿ ಹಡಗುಗಳೂ ಕಂಡವು.

ಮರಳುವಾಗ ಗಾಲೆಯ ಡಚ್ ಕೋಟೆ ವೀಕ್ಷಿಸಿದೆವು. ಡಚ್ಚರು ಕಟ್ಟಿದ ಈ ಕೋಟೆ ಬ್ರಿಟಿಷರ ಕಾಲದಲ್ಲಿ ಅಭಿವೃದ್ಧಿಗೊಂಡಿತು. ಸಮುದ್ರದ ತಡದಲ್ಲಿರುವ ಈ ಕೋಟೆ, ಪ್ರಕೃತಿ–ಮಾನವನ ಕೈಚಳಕ ಒಂದಾದ ಸ್ಥಳದಂತೆ ಕಾಣುತ್ತದೆ. ಅಲ್ಲೇ ಕಟ್ಟೆ ಮೇಲೆ 'ಇಲ್ಲಿ ಕುಳಿತುಕೊಳ್ಳಬೇಡಿ, ಹಕ್ಕಿಯಂತೆ ಹಾರಿ' ಎಂದು ಬರೆದದ್ದು ಗಮನ ಸೆಳೆಯಿತು. ಆ ಪ್ರಶಾಂತ ತಾಣದಲ್ಲಿ ಮನಸ್ಸು ಹಕ್ಕಿಯೇ ಆಗಿತ್ತು.

ಇನ್ನೊಂದು ದಿನ ಆಮೆ ಸಂಗ್ರಹಾಲಯಕ್ಕೆ ನಮ್ಮ ಭೇಟಿ. ಮೀನು, ಆಮೆ ಮರಿಗಳನ್ನು ಸಾಕಿ ಸಮುದ್ರಕ್ಕೆ ಬಿಡುವ ಕಾಯಕ ಮಾಡುತ್ತಾರೆ. ಅಲ್ಲಿರುವ ಮೀನು, ಆಮೆಗಳ ನೂರಾರು ಪ್ರಭೇದಗಳನ್ನು ನೋಡಲು ಕನಿಷ್ಠ ಅರ್ಧ ದಿನವಾದರೂ ಬೇಕಾಗುತ್ತದೆ. ಅಲ್ಲಿನ ಚಹಾ ಕೂಡ ವಿಶ್ವಪ್ರಸಿದ್ಧಿ. ಆರ್ಗ್ಯಾನಿಕ್, ಸಿಲೋನ್ ಬ್ಲಾಕ್, ಸಿಲೋನ್ ಗ್ರೀನ್, ಹರ್ಬಲ್ ಫ್ಲೇವರ್ – ಹೀಗೆ ಸಾವಿರ ವಿಧದ ಚಹಾ ದೊರೆಯುತ್ತದೆ. ಅಲ್ಲಿಗೆ ಹೋದ ಮೇಲೆ ಚಹಾ ರುಚಿ ನೋಡದೇ ಇದ್ದರಾದೀತೆ?

## ಸುನಾಮಿಯ ಕರಾಳ ನೆನಪು

2004ರಲ್ಲಿ ಅಪ್ಪಳಿಸಿದ ಸುನಾಮಿಯಲ್ಲಿ ಸಾವಿರಾರು ಜನರು ಪ್ರಾಣ ತೆತ್ತರು. ಈ ವಿಕೋಪದಲ್ಲಿ ಮೃತಪಟ್ಟ ಲಂಕನ್ನರ ನೆನಪಿಗಾಗಿ ಜಪಾನೀಯರು ಹಿಕ್ಕಡುವಾ ಎಂಬಲ್ಲಿ ಸ್ಮಾರಕವನ್ನು ನಿರ್ಮಿಸಿದ್ದಾರೆ. ಬೃಹತ್ ಗಾತ್ರದ ಬುದ್ಧ ವಿಗ್ರಹದ ಎದುರಿಗೆ ನಿರ್ಮಾಣಗೊಂಡಿರುವ ಈ ಸ್ಮಾರಕ, ಅರೆಕ್ಷಣ ಸುನಾಮಿಯ ಕರಾಳ ನೆನಪುಗಳನ್ನು ಕೆದಕುತ್ತದೆ. ಸಾವುನೋವಿನ ಲೆಕ್ಕಾಚಾರಗಳನ್ನು ಮೀರಿ ಪ್ರಕೃತಿ ತೋರಿದ ರೂಪ ಮನಸ್ಸು ಕದಡುವಂತೆ ಮಾಡುತ್ತದೆ.

ಕೊನೇ ದಿನ, ನಮ್ಮ ಕನಸಿನ, ರಾಮಾಯಣದ ಅಶೋಕ ವನದತ್ತ ಪಯಣ ಬೆಳೆಸಿದೆವು. ನ್ಯುವರೇಲಿಯ ಎಂಬಲ್ಲಿರುವ 'ಅಶೋಕ ವಾಟಿಕಾ'ದಲ್ಲಿ ರಾಮಸೀತಾ ಎಂಬ ಪುಟ್ಟ ದೇಗುಲವಿದೆ. ವನದಲ್ಲಿ ಅಶೋಕ ವೃಕ್ಷದ ಮಾತಿರಲಿ, ದೊಡ್ಡ ಗಿಡ ಮರಗಳೂ ಇಲ್ಲದ್ದನ್ನು ಕಂಡು ಭ್ರಮನಿರಸನವಾಯಿತು. ಚಹಾ ಬೆಳೆಗಾಗಿ ಬೋಳಾಗಿ, ಚಹಾ ಕಾರ್ಖಾನೆಗಳು ತಲೆ ಎತ್ತಿರುವ ಆ ಸ್ಥಳ ನಮ್ಮನ್ನು ನಿರಾಶರನ್ನಾಗಿ ಮಾಡಿತ್ತು. ಅಲ್ಲೇ ಬಂಡೆಯೊಂದರ ಮೇಲೆ ಸಿಮೆಂಟಿನಲ್ಲಿ ಸೀತಾ ಆಂಜನೇಯರ ಪ್ರತಿಕೃತಿ ಮೂಡಿಸಿದ್ದರು. ಹನುಮನ ಪಾದಕ್ಕೆ ನಮಸ್ಕರಿಸಿ ಹಿಂದಿರುಗಿದೆವು.

ಲಂಕಾ ಪ್ರವಾಸದಲ್ಲಿ ಮನಕ್ಕೆ ಬಹಳ ಮುದ ನೀಡಿದ ಏಕೈಕ ಸ್ಥಳ ಕ್ಯಾಂಡಿಯಲ್ಲಿನ 'ಬುದ್ಧ ದಂತ ದೇಗುಲ'. ಬೌದ್ಧ ಧರ್ಮದ ನೆಲವಾಗಿರುವ ಶ್ರೀಲಂಕಾದಲ್ಲಿ ಬುದ್ಧ, ಆತನ ತತ್ವಗಳಿಗೆ ಕನ್ನಡಿ ಹಿಡಿಯುವ ಪ್ರಯತ್ನಗಳು ಹಲವು ಕಡೆ ಕಂಡವು. ಬುದ್ಧ ದಂತ ದೇಗುಲ ಕೂಡ ಅಂಥ ಸ್ಥಳಗಳಲ್ಲಿ ಒಂದು. ವಿಶಾಲ ಪ್ರದೇಶದಲ್ಲಿ ಹರಡಿಕೊಂಡಿರುವ ಈ ದೇಗುಲದ ಪೂಜಾ ವಿಧಾನ ಭಾರತೀಯರಂತೆಯೇ ಇದೆ.

ಕಣ್ಣೋಟ ಹರಿದಷ್ಟೂ ಮಿಗುವ ನೀಲ ಜಲದಿಂದ ಆವೃತಗೊಂಡಿರುವ ಶ್ರೀಲಂಕಾ ತನ್ನ ಸುಂದರ ಪ್ರಾಕೃತಿಕ ದೃಶ್ಯಗಳು, ಜಲಪಾತಗಳು ಹಾಗೂ ಬುದ್ಧನ ಅಪೂರ್ವ ವಿಗ್ರಹಗಳಿಂದ ಮನಸೆಳೆದರೂ ಹಿಂದಿರುಗುವಾಗ ಆ ಲಕ್ಷ್ಮಣನಿಗೆ ಅನ್ನಿಸಿದಂತೆಯೇ ನಮಗೂ 'ಅಪಿ ಸ್ವರ್ಣ ಮಯೀ ಲಂಕಾ ನಮೇ ಲಕ್ಷ್ಮಣ ರೋಚತೇ ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸೀ' ಅನ್ನಿಸಿಬಿಡುತ್ತದೆ.

ಪ್ರತಿಕ್ರಿಯಿಸಿ: feedback@sudha.co.in

